# ಸಿನಿಮಾವಾಗಿ ವೈದೇಹಿಯವರ 'ಗುಲಾಬಿ ಟಾಕೀಸು' ಹಾಗೂ 'ಅಮ್ಮಚ್ಚಿಯೆಂಬ ನೆನಪು'

**ಮಮತ ಎಂ.**

ಉಪನ್ಯಾಸಕರು, ಕನ್ನಡ ವಿಭಾಗ, ಮಿಲಾಗ್ರಿಸ್ ಕಾಲೇಜು, ಹಂಪನಕಟ್ಟ , ಮಂಗಳೂರು.

**Received: 05-07-2024 ; Acepted: 10-07-2024 ; Published: 11-08-2024**

**DOI: https://doi.org/10.5281/zenodo.13284130**

**ABSTRACT:**

ಕನ್ನಡ ಸಾಹಿತ್ಯದಲ್ಲಿ ಚಿರಪರಿಚಿತ ಹೆಸರು ವೈದೇಹಿ. ನೇರ ದಿಟ್ಟ ಗಂಭೀರ ನಡೆನುಡಿಯಿಂದ ಕನ್ನಡ ಮಹಿಳಾ ಸಾಹಿತ್ಯದಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿದವರು. ವೈದೇಹಿಯವರ ಕೃತಿಗಳಲ್ಲಿ ಅನುಭವದ ಮಾಲಿಕೆ ಇದೆ. ಹೆಣ್ಣಿನ ಗಂಭೀರ ಸಮಸ್ಯೆಗಳ ಬಗ್ಗೆ ಕಾಳಜಿ ಇದೆ. ಹಾಗಾಗಿ ಅವರ ಕಥೆಗಳು ಕೇವಲ ಪುಸ್ತಕಕ್ಕೆ ಮಾತ್ರ ಸೀಮಿತವಾಗದೆ ನಾಟಕವಾಗಿ ರಂಗದ ಮೇಲೆ, ಸಿನಿಮಾವಾಗಿ ಪರದೆಯ ಮೇಲೆ ಪ್ರದರ್ಶನಗೊಂಡಿದೆ. ಮಹಿಳಾಪರವಾಗಿ, ಹೆಣ್ಣಿಗೊಂದು ಗಟ್ಟಿ ಧ್ವನಿಯಾಗಿ, ಸಾಂತ್ವನದ ನುಡಿಗಳ ಮೂಲಕ ಓದುಗರನ್ನು ತಲುಪಿದೆ. ಹೆಣ್ಣಿನ ಅನುಭವದ ನೆಲೆಯಿಂದ ಬದುಕನ್ನು ಪರಿಶೀಲನಾತ್ಮಕವಾಗಿ ನೋಡುವ ಕಾಳಜಿಯೊಂದು ಆಕೆಯ ಕೃತಿಗಳಲ್ಲಿ ಕಾಣಿಸುತ್ತದೆ. ಕನ್ನಡದ ಸಿನಿ ಪರದೆಯಲ್ಲಿ ವೈದೇಹಿ ಅವರ 'ಗುಲಾಬಿ ಟಾಕೀಸು' ಅದೇ ಹೆಸರಿನಲ್ಲಿ ಕನ್ನಡದ ಕಲಾತ್ಮಕ ಚಿತ್ರವಾಗಿ ಮೂಡಿ ಬಂದಿದೆ. 'ಅಮ್ಮಚ್ಚಿಯೆಂಬ ನೆನಪು' ಚಿತ್ರವು ವೈದೇಹಿಯವರ ಮೂರು ಸಣ್ಣ ಕಥೆಗಳನ್ನು ಆಧರಿಸಿ ಪರದೆಯ ಮೇಲೆ ಮೂಡಿಬಂದಿದೆ. ಯಾವುದೇ ಒಂದು ಸಿನೆಮಾಗೆ ಅದರ ಕಥಾ ವಸ್ತುವಷ್ಟೇ ಅಲ್ಲ, ಕಥೆಯೂ ಗಟ್ಟಿಯಾಗಿದ್ದಾಗಲೇ ಅದು ಮನಸ್ಸಿಗೆ ನಾಟುತ್ತದೆ, ಸ್ಮೃತಿ ಪಟಲದಲ್ಲಿ ನೆಲೆಯೂರುತ್ತದೆ. ಉತ್ತಮವಾದ ಕಥೆ ಹಾಗೂ ಕಥಾ ವಸ್ತುವಿನ ಜೊತೆಗೆ, ಅನೇಕ ಸಂದೇಶಗಳನ್ನು ಈ ಚಿತ್ರ ಕೊಡುತ್ತದೆ.

**KEYWORDS:**

ಗುಲಾಬಿ ಟಾಕೀಸು, ಸಿನಿಮಾ, ಬೆಳ್ಳಿಪರದೆ, ಮನೋಜ್ಞ, ಅಮ್ಮಚ್ಚಿಯೆಂಬ ನೆನಪು.

## ಪೀಠಿಕೆ:

ಕನ್ನಡ ಸಾಹಿತ್ಯ ಲೋಕದಲ್ಲಿ ಕವಿತೆ, ಕಥೆ, ಕಾದಂಬರಿ, ನಾಟಕ, ಆತ್ಮಕಥೆ ನಿರೂಪಣೆ, ಮಕ್ಕಳ ಸಾಹಿತ್ಯ ಹೀಗೆ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಗುರುತಿಸಿಕೊಂಡು ಕನ್ನಡ ಸಾಹಿತ್ಯ ಲೋಕವನ್ನು ಮಾತ್ರವಲ್ಲದೆ ಕನ್ನಡ ಸಿನಿಮಾ ಲೋಕಕ್ಕೂ ವಿಶೇಷವಾದ ಕೊಡುಗೆಯನ್ನು ನೀಡಿದವರು ಖ್ಯಾತ ಸಾಹಿತಿ ಡಾ. ವೈದೇಹಿ. ತಮ್ಮ ಬರವಣಿಗೆಯುದ್ದಕ್ಕೂ ಸಮಕಾಲೀನ ಬದುಕಿನ ಚಿತ್ರಣವನ್ನು ಕೃತಿಗಳ ಮೂಲಕ ಹಂಚಿಕೊಂಡು ಹೊಸತನವನ್ನು ನೀಡಿದವರು. ಬದುಕಿನ ಯಾವ ಸಂದರ್ಭದಲ್ಲಿ ಎದೆಗುಂದದೆ ಜೀವನೋತ್ಸಾಹವನ್ನು ತುಂಬಿಕೊಂಡ

ಬದುಕು ಅವರದ್ದು. ಅವರ ಕೃತಿಗಳಲ್ಲಿ ಹೆಚ್ಚಾಗಿ ಸ್ತ್ರೀ ಕೇಂದ್ರೀತವಾದ ಬರವಣಿಗೆಯನ್ನೇ ನಾವು ಕಾಣಬಹುದು. ವೈದೇಹಿಯವರು ತಮ್ಮ ಕೃತಿಗಳಲ್ಲಿ ಕಟ್ಟಿದ ಪಾತ್ರಗಳಲ್ಲಿ ಯಾವುದೇ ಢಾಂಬಿಕತೆಯಾಗಲಿ ಪುಕ್ಕಲುತನವಾಗಲಿ ಇರದೆ ಮನಸ್ಸಿನಲ್ಲಿ ಬೇರು ಬಿಟ್ಟ ಪಾತ್ರಗಳನ್ನು ಹೆಕ್ಕಿ ತೆಗೆದು ದೀರ್ಘವಾದ ಆಲಾಪದೊಂದಿಗೆ ತನ್ಮಯತೆಯಿಂದ ಜೀವ ತುಂಬಿಸಿ ನಮ್ಮೆದುರು ನಿಲ್ಲಿಸಿದ್ದಾರೆ.

ವೈದೇಹಿಯವರ ಕೃತಿಗಳಲ್ಲಿ ಅನುಭವದ ಮಾಲಿಕೆ ಇದೆ. ಹೆಣ್ಣಿನ ಗಂಭೀರ ಸಮಸ್ಯೆಗಳ ಬಗ್ಗೆ ಕಾಳಜಿ ಇದೆ. ಹಾಗಾಗಿ ಅವರ ಕಥೆಗಳು ಕೇವಲ ಪುಸ್ತಕಕ್ಕೆ ಮಾತ್ರ ಸೀಮಿತವಾಗದೆ ನಾಟಕವಾಗಿ ರಂಗದ ಮೇಲೆ, ಸಿನಿಮಾವಾಗಿ ಪರದೆಯ ಮೇಲೆ ಪ್ರದರ್ಶನಗೊಂಡಿದೆ. ಇದು ಅವರ ಸಾಹಿತ್ಯ ಪ್ರೌಢಿಮೆಗೆ ಸಾಕ್ಷಿಯಾಗಿದೆ. ಇನ್ನೊಂದೆಡೆ ವೈದೇಹಿಯವರು ಬರೆದಿರುವ ಬಹುತೇಕ ಕಥಾ ಸಂಕಲನಗಳಲ್ಲಿ ಹೆಣ್ಣನ್ನೇ ಕೇಂದ್ರವಾಗಿಟ್ಟುಕೊಂಡು ಮತ್ತು ಹೆಣ್ಣಿನ ಅನುಭವದ ನೆಲೆಯಿಂದ ಬದುಕನ್ನು ಪರಿಶೀಲನಾತ್ಮಕವಾಗಿ ನೋಡುವ ಕಾಳಜಿಯೊಂದು ಕಾಣಿಸುತ್ತದೆ. ಕನ್ನಡದ ಸಿನಿ ಪರದೆಯಲ್ಲಿ ವೈದೇಹಿ ಅವರ 'ಗುಲಾಬಿ ಟಾಕೀಸು' ಅದೇ ಹೆಸರಿನಲ್ಲಿ ಕನ್ನಡದ ಕಲಾತ್ಮಕ ಚಿತ್ರವಾಗಿ ಮೂಡಿ ಬಂದಿದೆ. 'ಅಮ್ಮಚ್ಚಿಯೆಂಬ ನೆನಪು' ಸಿನಿಮಾವು ವೈದೇಹಿಯವರ ಮೂರು ಸಣ್ಣ ಕಥೆಗಳನ್ನು ಆಧರಿಸಿ ಪರದೆಯ ಮೇಲೆ ಮೂಡಿಬಂದಿದೆ.

**ಗುಲಾಬಿ ಟಾಕೀಸು:**

ಗಿರೀಶ್ ಕಾಸರವಳ್ಳಿ ಅವರ ನಿರ್ದೇಶನದಲ್ಲಿ 2008ರಲ್ಲಿ ತೆರೆಕಂಡ ಅದ್ಭುತ ಸಿನಿಮಾ ಗುಲಾಬಿ ಟಾಕೀಸು. ವೈದೇಹಿ ಅವರ ಸಣ್ಣ ಕಥೆ ಆಧಾರಿತ ಈ ಸಿನಿಮಾದಲ್ಲಿ ಮೂಲ ಕತೆಯ ಸೊಗಡಿಗೇನೂ ಧಕ್ಕೆ ಬರೆದಂತೆ ಹೆಣೆದಂತಿದೆ. ನಿರ್ದೇಶಕರ ಕೌಶಲ್ಯದಿಂದ ಬಹಳ ಅಚ್ಚುಕಟ್ಟಾಗಿ ತೆರೆಯ ಮೇಲೆ ಮೂಡಿಬಂದಿರುವುದು ಶ್ಲಾಘನೀಯ. ಕರಾವಳಿಯ ಭಾಷೆ, ಪ್ರಕೃತಿ, ಆಚಾರ ವಿಚಾರಗಳು ಜೊತೆಗೆ ಜನರ ಸಂಬಂಧಗಳು ಸುಂದರ ದೃಶ್ಯಾವಳಿಯಾಗಿ ಮೂಡಿ ಬಂದಿದೆ. ಕುಂದಗನ್ನಡದ ಕಂಪಿನಲ್ಲಿ ಮನೋಜ್ಞವಾದ ದೃಶ್ಯಗಳಿಂದ ವೀಕ್ಷಕನನ್ನು ಮತ್ತೆ ಮತ್ತೆ ನೋಡುವಂತೆ ಹುರಿದುಂಬಿಸುತ್ತದೆ. 57ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಸೇರಿದಂತೆ ಹಲವಾರು ಪ್ರಶಸ್ತಿಗಳನ್ನು ಈ ಸಿನಿಮಾ ಮುಡಿಗೇರಿಸಿಕೊಂಡಿದೆ.

ಸಿನಿಮಾದ ನಾಯಕಿ ಗುಲಾಬಿ ಮುಸ್ಲಿಂ ಸಮುದಾಯಕ್ಕೆ ಸೇರಿದ ಒಬ್ಬ ಮಧ್ಯ ವಯಸ್ಸಿನ ಹೆಂಗಸು. ಆಕೆ ತನ್ನ ಪ್ರತಿಭೆ ಹಾಗೂ ವ್ಯಕ್ತಿತ್ವದಿಂದ ಊರಿನ ಎಲ್ಲಾ ಸಮುದಾಯಗಳ ಪ್ರತಿಯೊಂದು ಕುಟುಂಬಕ್ಕೂ ಬೇಕಾದವಳಾಗಿ ಸಾಮರಸ್ಯದಿಂದ ಬದುಕುತ್ತಿರುತ್ತಾಳೆ. ಆಕೆ ತನ್ನ ಹೊಟ್ಟೆಪಾಡಿಗಾಗಿ ಮನೆ ಕೆಲಸ ಕಾಯಕವನ್ನು ನಡೆಸುತ್ತಿದ್ದಳು. ಜೊತೆಗೆ ಸೂಲಗಿತ್ತಿಯಾಗಿದ್ದು ತಾನಿಲ್ಲದೆ ಊರಿನ ಯಾವ ಕೂಸು ಜನ್ಮ ತಳೆಯಲು ಸಾಧ್ಯವಿಲ್ಲವೋ ಏನೋ ಅನ್ನುವಷ್ಟರ ಮಟ್ಟಿಗೆ ಪ್ರಸಿದ್ಧಿಯನ್ನು ಪಡೆದವಳಾಕೆ. ಆಕೆಗೆ ಸಿನಿಮಾದ ಬಗ್ಗೆ ವಿಪರೀತ ಶೋಕಿ. ನೋಡಿದ ಸಿನಿಮಾವನ್ನು ಎಷ್ಟು ಬಾರಿ ನೋಡಿದರೂ ಆಕೆಗೆ ಅದು ಬೇಜಾರಾಗೋದೇ ಇಲ್ಲ. ಸಿನಿಮಾದಲ್ಲಿ ಒಂದು ಕಡೆ ಆಕೆ ಇದರ ಬಗ್ಗೆ ಹೀಗೆ

ಹೇಳುತ್ತಾಳೆ, 'ಅವರು ತೋರ್ಸೋರ್ ಸಿನಿಮಾ ಒಂದೇ ಆದ್ರೂ ನಾ ಕಾಂಬೋ ಸಿನಿಮಾ ಬ್ಯಾರ್ಬಾರೆಯೇ' ಅನ್ನೋ ವಿಚಾರ ಅವಳದು. ಅಚಾನಕ್ಕಾಗಿ ಅವಳ ಮನೆಗೆ ಟಿವಿ ಬರುವುದು ನಾಗರೀಕರಣದ ಒಂದು ಪ್ರಕ್ರಿಯೆಯಂತೆ ನಮಗೆ ಗೋಚರಿಸುತ್ತದೆ. ಆಕೆಯ ಪುಟ್ಟ ಗುಡಿಸಲು ಟಾಕೀಸ್ ಆಗಿ ಪರಿವರ್ತನೆಯಾಗುತ್ತದೆ. ಊರಿನ ಜನರೆಲ್ಲ ಆಕೆಯ ಮನೆಗೆ ಟಿವಿ ನೋಡುವುದಕ್ಕಾಗಿ ಮುಗಿಬೀಳುತ್ತಿದ್ದರು. ಒಂದು ರೀತಿಯಲ್ಲಿ ನೋಡಿದರೆ ಅದು ಗುಲಾಬಿ ಟಾಕೀಸ್ ಆಗಿಯೇ ಪರಿವರ್ತನೆಯಾಯಿತು ಎನ್ನಬಹುದು. ಊರಿನ ಮಹಿಳೆಯರಲ್ಲಾಗುವ ಬದಲಾವಣೆ, ಅಂತರಾಷ್ಟ್ರೀಯ ಮಟ್ಟದಲ್ಲಿ ನಡೆಯುವ ಯುದ್ಧ ಸಾಮರಸ್ಯದಿಂದ ಬದುಕುತ್ತಿದ್ದ ಊರಿನಲ್ಲಿ ಹಿಂದೂ ಮುಸ್ಲಿಂ ಸಮುದಾಯದ ಜನರು ತಮ್ಮ ನಡುವಿನ ನಂಬಿಕೆ ವಿಶ್ವಾಸವನ್ನು ಕಳೆದುಕೊಂಡು ವಿಷಮ ಸ್ಥಿತಿಯಲ್ಲಿ ಊರನ್ನೇ ಬಿಡುವ ಸನ್ನಿವೇಶ ನಿರ್ಮಾಣವಾಗುತ್ತದೆ. ಊರಿನ ಜನ ಬಾಯಿ ತುಂಬಾ ಗುಲಾಬಿ ಎಂದು ಕರೆಯುತ್ತಿದ್ದವರು ಆಕೆ ಗುಲಾಬಿ ಅಲ್ಲ ಗುಲ್ನಾಬಿ ಎಂದು ಗೊತ್ತಾದಾಗ ಆಕೆಯನ್ನು ಬಲವಂತವಾಗಿ ಊರಿನಿಂದ ಹೊರಹಾಕುತ್ತಾರೆ.

ವೈದೇಹಿಯವರು ಬರೆದ ಕಥೆಗೂ ಚಿತ್ರದ ಕಥೆಗೂ ಅಜಗಜಾಂತರ ವ್ಯತ್ಯಾಸವಿದೆ. ಮೂಲ ಕತೆಯನ್ನು ಇಟ್ಟುಕೊಂಡು ಕಥೆಗೊಂದು ನವಿರಾದ ಚೌಕಟ್ಟನ್ನು ಒದಗಿಸಿ, ಜಾಗತೀಕರಣ, ನಗರೀಕರಣದ ಸೆಳೆತ ಗ್ರಾಮೀಣ ಭಾಗದಲ್ಲಿ ಹೇಗಾಗುತ್ತದೆ ಎಂಬುದನ್ನು ಬಹಳ ಸೊಗಸಾಗಿ ತಿಳಿಸುತ್ತಾ ಹೋಗುತ್ತಾರೆ ಸಿನಿಮಾ ನಿರ್ದೇಶಕರು. ಕಾಸರವಳ್ಳಿ ಸಿನಿಮಾ ಅಂದ್ರೆನೇ ಅದರಲ್ಲಿ ಒಂದು ಕಲಾತ್ಮಕತೆಯ ಸೊಗಡು ಇದ್ದೇ ಇರುತ್ತದೆ. ಸಮಾಜಕ್ಕೊಂದು ಸಂದೇಶ ನೀಡುತ್ತಾರೆ. ಬದುಕಿನ ಸತ್ಯದರ್ಶನವನ್ನು ಮಾಡಿಸುತ್ತಾರೆ. ಅದರೊಂದಿಗೆ ವೀಕ್ಷಕ ದೊರೆಗಳ ಭಾವಕ್ಕೆ ತಕ್ಕಂತೆ ಉತ್ತರ ಕಂಡುಕೊಳ್ಳುವುದಕ್ಕೆ ಬಿಟ್ಟುಬಿಡುತ್ತಾರೆ. ಸಹಜವಾದ ಆಡುಮಾತಿನ ಸಂಭಾಷಣೆಯಿಂದಾಗಿ ಅದು ಇನ್ನಷ್ಟು ವೀಕ್ಷಕನಿಗೆ ಆಪ್ತವಾಗಿ ಬಿಡುತ್ತದೆ.

ಎಂಟುನೂರು ಮುಡಿ, ಹುಟ್ಟುವಳಿ ಭೂಮಿಯಿದ್ದರೂ ಸಿನಿಮಾ ಟಿಕೆಟ್‌ಗೆ ದುಡ್ಡಿಲ್ಲದೆ ಪರದಾಡುವ ಮಂಜುನಾಥಯ್ಯ, ಆತನ ಹೆಂಡತಿ ಇವರೆಲ್ಲ ಒಂದಲ್ಲ ಒಂದು ರೀತಿಯಲ್ಲಿ ಅವಲಂಬಿತರು. ಅಸಹಾಯಕರು. ಇಂಥವರ ಅಂತರಂಗದ ಪುಟಗಳು, ಸ್ವಗತಗಳು ವೈದೇಹಿ ಅವರ ಕಥೆಗಳ ಜೀವಾಳ. ವೈದೇಹಿ ಅವರ ಗುಲಾಬಿ ಟಾಕೀಸು ಸಣ್ಣ ಅಲೆಯಾದರೆ, ಗಿರೀಶ್ ಕಾಸರವಳ್ಳಿಯ ಗುಲಾಬಿ ಟಾಕೀಸು ದೊಡ್ಡ ಅಲೆ. ವೈದೇಹಿ ಅವರ ಕಥೆ ಎಲ್ಲಿ ನಿಲ್ಲುತ್ತದೆ ಅಲ್ಲಿ ಕಾಸರವಳ್ಳಿ ಅವರ ಸಿನಿಮಾ ಆರಂಭವಾಗುತ್ತದೆ. ಗಿರೀಶ್ ಕಾಸರವಳ್ಳಿಯವರು ವೈದೇಹಿ ಅವರ ಕಥೆಯಿಂದ ಸೃಜನಶೀಲ ಪ್ರೇರಣೆ ಪಡೆದು ವಿಶಿಷ್ಟ ಸಿನಿಮಾ ಕಥೆ ಬರೆದಿದ್ದಾರೆ. ಅಂಥದೊಂದು ಹೊಸ ಪ್ರಯೋಗ ಗುಲಾಬಿ ಟಾಕೀಸು.

ಗುಲಾಬಿ ಟಾಕೀಸು, ಕರಾವಳಿಯ ಕಡಲ ಕಿನಾರೆಯಲ್ಲಿ ಬಹುಧರ್ಮೀಯರು ವಾಸಿಸುತ್ತಿದ್ದ ಪ್ರದೇಶದ ಒಂದು ಮನೆಗೆ ಮೊದಲ ಬಾರಿಗೆ ಟಿವಿ ಬಂದಾಗ ಹೆಂಗಸರ ದಿನಚರಿಯಲ್ಲಿ, ಬದುಕಿನಲ್ಲಿ ಆದ ಪರಿವರ್ತನೆಗಳನ್ನು ಸೂಕ್ಷ್ಮ ಕುಸುರಿ ಕೆಲಸದಂತೆ ಚಿತ್ರಿಸುತ್ತದೆ. ಸೂಲಗಿತ್ತಿಯಾಗಿ ಪರೋಪಕಾರ ಮಾಡುವ ಗುಲಾಬಿಯ ಮನೆ ಟಿವಿಯ ಆಗಮನದಿಂದಾಗಿ ಮತ್ತಷ್ಟು ಜನಪ್ರಿಯವಾಗುತ್ತದೆ. ಒಂದು ಬಾರಿ ಊರಿನ ಕಲ್ಯಾಣಮ್ಮನ

ಮಗಳಿಗೆ ಹೆರಿಗೆ ನೋವು ಶುರುವಾದಾಗ ಹೆರಿಗೆ ಮಾಡಿಸುವುದಕ್ಕಾಗಿ ಗುಲಾಬಿಯನ್ನು ಹುಡುಕಿಕೊಂಡು ಕಲ್ಯಾಣಮ್ಮನ ಕಡೆಯವರು ಬರುತ್ತಾರೆ. ಆದರೆ ಎಲ್ಲಿ ನೋಡಿದರೂ ಗುಲಾಬಿಯ ಪತ್ತೆಯೇ ಇಲ್ಲ. ಕೆಲವು ಕಡೆ ವಿಚಾರಿಸಿದಾಗ 'ಗುಲಾಬಿ ಈ ಹೊತ್ತಿನಲ್ಲಿ ಮನೆಯಲ್ಲಿ ಎಲ್ಲಿ ಇರ್ತಾಳೆ, ಅವಳು ಸಿನಿಮಾಕ್ಕೆ ಹೋಗಿದ್ದಾಳೆ' ಎನ್ನುವರು. ಅವಳ ಸಿನಿಮಾ ಹುಚ್ಚು ಎಷ್ಟಿತ್ತೆಂದರೆ 'ಒಂದು ಸಲ ಸಿನಿಮಾ ಶುರುವಾಯಿತ ಈ ಗುಲಾಬಿ ಕೂತ್ಕೊಂಡ ಕಡೆಯಿಂದ ಅಲ್ಲಾಡಲ್ಲ' ಅಷ್ಟೊಂದು ಸಿನಿಮಾದ ಬಗೆಗಿನ ಒಲವನ್ನು ಆಕೆ ಹೊಂದಿದ್ದಳು. ಕಲ್ಯಾಣಮ್ಮನ ಮಗಳಿಗೆ ಹೆರಿಗೆ ಮಾಡಿಸಿದರೆ ನಿನಗೆ ಕಲರ್ ಟಿವಿ ಕೊಡಿಸುವುದಾಗಿ ಹೇಳಿದಳು. ಹೊಸ ಹೊಸ ಸಿನಿಮಾಗಳು ಅದರಲ್ಲಿ ಬರುವುದಿಲ್ಲ ಎಂದಾಗ ಆಕೆ ಡಿಶ್ ವ್ಯವಸ್ಥೆಯನ್ನು ಮಾಡಿಕೊಡುತ್ತೇನೆ ಎಂದು ಹೇಳಿದ ಮೇಲೆಯೇ ಆಕೆ ಸುಸೂತ್ರವಾಗಿ ಹೆರಿಗೆಯನ್ನು ಮಾಡಿಸಿದಳು.

ಮನೆಗೆ ಟಿವಿ ಬಂದ ಮೇಲೆ ಗುಲಾಬಿಯ ದಿನಚರಿಯೇ ಬದಲಾವಣೆಯಾಗುತ್ತದೆ. ಮನೆಕೆಲಸಕ್ಕೆ ತಡವಾಗಿ ಹೋಗುವುದು, ತಡವಾಗಿ ಬಂದುದ್ದಕ್ಕೆ ಸಿನಿಮಾ ಇದ್ದುದರ ಕಾರಣವನ್ನು ಕೊಡುವುದು ಇದೆಲ್ಲ ಮಾಮೂಲಿಯಾಗಿ ಬಿಡುತ್ತದೆ. ಇನ್ನು ಕೆಲವು ಮನೆಯಲ್ಲಿನ ಹೆಂಗಸರಿಗೆ ಗುಲಾಬಿ ಮನೆಗೆ ಟಿವಿ ನೋಡಲು ಹೋಗುವ ಮನಸಿದ್ದರೂ ಜಾತಿ ಎಂಬ ಅಡ್ಡ ಗೋಡೆ ಅವರನ್ನು ಹೋಗದಂತೆ ತಡೆಯುತ್ತಿತ್ತು. ಅಂದಿನ ಸಮಾಜ ವ್ಯವಸ್ಥೆಯಲ್ಲಿ ಇದ್ದಂತಹ ಜಾತಿ ಪದ್ಧತಿಯ ಕರಾಳಮುಖವನ್ನು ತೆರೆದಿಡುತ್ತದೆ.

ಕೊನೆಗೊಮ್ಮೆ ಗುಲಾಬಿಯ ಸಾಂಸಾರಿಕ ಬದುಕಿನಲ್ಲೂ ಒಂದು ಬದಲಾವಣೆ ಕಾಣಿಸಿಕೊಳ್ಳುತ್ತದೆ. ಎರಡನೇ ಮದುವೆಯಾದ ನಂತರ ಮುಖವನ್ನೇ ನೋಡದೆ ಇದ್ದಂತಹ ಆಕೆಯ ಗಂಡ ಗುಲಾಬಿ ಮನೆಯಲ್ಲಿ ಟಿವಿ ಬಂದ ನಂತರ ಅಪರೂಪಕ್ಕೆ ಟಿವಿಯ ನೆಪ ಹೇಳಿಕೊಂಡು ಮನೆಗೆ ಬರುತ್ತಾನೆ. ಮನೆಗೆ ಬಂದ ಗಂಡನಿಗೆ ಟೀ ಕೊಟ್ಟ ಗುಲಾಬಿಗೆ, 'ಬರೀ ಚಾ ಕೊಟ್ಟು ಕಳಿಸ್ತಿಯೋ ಊಟ-ಗೀಟಾ ಏನಾರು ಇದಿಯೋ? ನೀನು ಮಾಡೋ ಬಂಗುಡೆ ಗಸಿ ತಿನ್ನದೇ ಎಷ್ಟು ವರ್ಷವಾಯಿತು? ಎಂದು ಆಕೆಯ ಗಂಡ ಹೇಳಿದಾಗ ಪಕ್ಕದ್ಮನೆ ರತ್ನನ ಮನೆಯಿಂದ ಬಂಗುಡೆ ಮೀನನ್ನು ಕೇಳಿ ಪಡೆಯುತ್ತಾಳೆ. ಇವರ ಸಂಬಂಧ ಇನ್ನು ಗಟ್ಟಿಯಾಗಿರಬೇಕು ಗಂಡನ ಮನಸ್ಸನ್ನು ಗುಲಾಬಿ ಗೆಲ್ಲಬೇಕೆಂದು ಬೆಳ್ತಕ್ಕಿಯನ್ನು ಗುಲಾಬಿ ಕೇಳದಿದ್ದರೂ ರತ್ನ ಕೊಟ್ಟು ಕಳುಹಿಸುತ್ತಾಳೆ. ಇಂತಹ ಸಂಬಂಧಗಳು ಮನುಷ್ಯ ಸಂಬಂಧಗಳನ್ನು ಗಟ್ಟಿಗೊಳಿಸುತ್ತದೆ. ಒಂದು ಹೆಣ್ಣಿನ ಅಂತರಂಗವನ್ನು ಅರಿತವಳಾಗಿ ಇಲ್ಲಿ ರತ್ನ ಕಾಣಿಸಿಕೊಳ್ಳುತ್ತಾಳೆ.

ಒಂದೇ ಒಂದು ಟಿವಿ ಹೆಣ್ಣೊಬ್ಬಳ ಠೀವಿಯನ್ನೇ ಹೇಗೆ ಬದಲಿಸುತ್ತದೆ, ಬದುಕಿನ ದಿಕ್ಕನ್ನು ಹೇಗೆ ತಿರುಗಿಸುತ್ತದೆ, ಹಣದಾಹಿ ಗಂಡ, ಎರಡನೇ ಮದುವೆಯಾಗಿ ಆಕೆಯನ್ನು ಬಿಟ್ಟರೂ, ಅದೇ ವಠಾರದಲ್ಲಿ ವಾಸಿಸುತ್ತಿದ್ದರು ತನ್ನ ಆಸೆ ಆಕಾಂಕ್ಷೆಗಳನ್ನು ಮನಸ್ಸಿನಲ್ಲಿ ಕಾಪಿಡುವ ಆಕೆ ಒಂದು ರೀತಿಯಲ್ಲಿ ಪುರುಷ ಸಮಾಜದಲ್ಲಿ ತಿರಸ್ಕೃತಳಾಗಿ ಬದುಕುತ್ತಿರುವಂತೆ ಕಾಣಿಸುತ್ತದೆ. ಗಂಡ ಮಾಡಿದ ತಪ್ಪಿಗೆ ಏನೂ ಅರಿಯದ, ತಪ್ಪು ಮಾಡದ ಹೆಂಡತಿ ಏಕೆ ಬಲಿಯಾದಳು, ಧರ್ಮ ಕರ್ಮಗಳು ಹೇಗೆ ರಕ್ತಸಂಬಂಧಕ್ಕೆ ದಿಗ್ಬಂದನ

ಹಾಕುತ್ತವೆ ಎನ್ನುವ ಹಲವಾರು ಪ್ರಶ್ನಾರ್ಥಕ, ಉತ್ತರಾತೀತ ಪ್ರಶ್ನೆಗಳಿಗೆ ಸ್ಪಷ್ಟ ಉತ್ತರ ಗುಲಾಬಿ ಟಾಕೀಸು.

ಮೀನುಗಾರರ ಬದುಕು-ಬವಣೆ, ನಗರೀಕರಣದಿಂದಾಗುವ ದಿಢೀರ್ ಬದಲಾವಣೆ ದೇಶದ ಯಾವುದೋ ಪ್ರದೇಶದಲ್ಲಿ ನಡೆದ ಯುದ್ಧ ಕೋಮು ಸೌಹಾರ್ದತೆಗೆ ಧಕ್ಕೆ ತಂದು ಜಾತಿ ಜಾತಿಗಳ ಮಧ್ಯೆ ದ್ವೇಷವನ್ನು ಉಂಟುಮಾಡುವುದು ಮುಂತಾದ ವಿಷಯಗಳು ಕೆಲವೇ ಗಂಟೆಯಲ್ಲಿ ಚರ್ಚೆಯಾಗುತ್ತವೆ. ಕಥಾ ನಾಯಕಿ ಉಮಾಶ್ರೀ ಪಾತ್ರದ ಬಗ್ಗೆ ಏನು ಹೇಳುವುದು? ಅವರು ಬರೀ ಅಭಿನಯಿಸಿಲ್ಲ, ಆ ಪಾತ್ರವೇ ತಾವಾಗಿದ್ದಾರೆ. ಗುಲಾಬಿಯ ಪಾತ್ರದಲ್ಲಿ ಪರಕಾಯ ಪ್ರವೇಶ ಮಾಡಿ ಇಲ್ಲಿವರೆಗಿನ ಅವರದೇ ಪಾತ್ರಗಳನ್ನು ಮೀರಿಸಿದ್ದಾರೆ. ಆಕೆಯ ಹಾವ ಭಾವಗಳಲ್ಲಿ ಒಂಚೂರು ಕುಂದು ಬಾರದಂತೆ, ಈ ಹಿಂದೆ ತಾನು ಇದೆ ಧಿರಿಸು ಧರಿಸಿದ್ದವಳಂತೆ ಕಾಣುವಂತಿತ್ತು. ಜೊತೆಗೆ ಕೆ. ಜಿ. ಕೃಷ್ಣಮೂರ್ತಿ, ಎಂ. ಡಿ. ಪಲ್ಲವಿಯವರು ತಮ್ಮ ಪಾತ್ರಗಳಿಗೆ ನ್ಯಾಯವನ್ನು ಸಲ್ಲಿಸಿದ್ದಾರೆ. ಒಟ್ಟಾರೆಯಾಗಿ ಗಮನಿಸಿದರೆ ಗುಲಾಬಿ ಟಾಕೀಸು ಅಪ್ಪಟ ದೇಸೀಯತೆಯನ್ನು ಬಿಂಬಿಸಿದ ಸಿನಿಮಾ. ಕರಾವಳಿಯ ಸೊಗಡು, ಭಾಷೆ, ಸಂಸ್ಕೃತಿ, ಆಚಾರ ವಿಚಾರಗಳು ಮೇಳೈಸಿವೆ ಅಂದರೆ ತಪ್ಪಾಗಲಾರದು.

**ಅಮ್ಮಚ್ಚಿಯೆಂಬ ನೆನಪು:**

2018ರಲ್ಲಿ ತೆರೆಕಂಡ ಒಂದು ಕನ್ನಡ ನಾಟಕೀಯ ಚಲನಚಿತ್ರ. ಚಂಪಾ ಪಿ. ಶೆಟ್ಟಿ ನಿರ್ದೇಶಿಸಿದ ಈ ಚಿತ್ರವು ಸಾಹಿತ್ಯ ವೈದೇಹಿಯವರ ಮೂರು ಸಣ್ಣಕಥೆಗಳ ಮೇಲೆ ಆಧಾರಿತವಾಗಿದೆ. ಸ್ತ್ರೀಲೋಕದ ತಲ್ಲಣಗಳು ಕಾಲಕಾಲಕ್ಕೆ ಸ್ವರೂಪವನ್ನು ಬದಲಾಯಿಸಿಕೊಳ್ಳುತ್ತಿದೆ ಬಿಟ್ಟರೆ ಆ ತಲ್ಲಣ ಸೃಷ್ಟಿಸುವ ಕಂಪನಕ್ಕೆ ಇಂದಿಗೂ ಸರಿಯಾದ ಧ್ವನಿ ಸಿಕ್ಕಿಲ್ಲ. ಎಷ್ಟೇ ಶತಮಾನಗಳು ದಾಟಿದರೂ ಹೆಣ್ಣಿನ ಭವಣೆ ತಪ್ಪುವಂತದ್ದಲ್ಲ. ವೈದೇಹಿಯವರ ಮೂರು ಸಣ್ಣಕಥೆಗಳನ್ನು ಆಧರಿಸಿ ರಚಿತವಾದ ಅಮ್ಮಚ್ಚಿಯೆಂಬ ನೆನಪು ಸಿನಿಮಾವು ಹಿರಿಯ ತಲೆಮಾರಿನ ಜೊತೆ ಹೊಸ ತಲೆಮಾರಿನ ಸಂಘರ್ಷಗಳು ಬೆಸೆದುಕೊಂಡಿವೆ. ಅಂದಿನ ಮಹಿಳೆಯ ನೋವಿಗೂ ಇಂದಿನ ಮಹಿಳೆಯ ನೋವಿಗೂ ಅಂತರ ತುಂಬಾ ಏನೂ ಕಾಣಿಸಿಕೊಂಡಿಲ್ಲ. ಅಂತಹ ಹೆಣ್ಣಿನ ಸಾಂಸಾರಿಕ ಹಾಗೂ ಸಾಮಾಜಿಕ ಬದುಕಿನ ತಲ್ಲಣಗಳೇ ಈ ಸಿನಿಮಾದ ಕಥಾವಸ್ತು.

ಅಮ್ಮಚ್ಚಿ, ಅಕ್ಕು ಹಾಗೂ ಪುಟ್ಟಮತ್ತೆ ಈ ಮೂವರು ಬದುಕಿನಲ್ಲಿ ತಮ್ಮದೇ ಆದ ಕನಸು ಆಸೆ ಆಕಾಂಕ್ಷೆಗಳನ್ನು ಹೊಂದಿದವರು. ಅವುಗಳನ್ನು ವ್ಯಕ್ತಪಡಿಸುವ ಅಮ್ಮಚ್ಚಿ ಸೊಕ್ಕಿನವಳಾಗಿ, ಅಕ್ಕು ಹುಚ್ಚಿಯಾಗಿ, ಪುಟ್ಟಮತ್ತೆ ವಿಧವೆಯಾಗಿ ಸಿನಿಮಾದಲ್ಲಿ ಚಿತ್ರತವಾಗುತ್ತಾರೆ. ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣಿನ ಆಸೆ ಆಕಾಂಕ್ಷೆಗಳಿಗೆ ಹೇಗೆ ಸ್ಥಾನ ಸಿಗೋದಿಲ್ಲ ಮತ್ತು ಅದನ್ನು ಪಡೆಯುವುದಕ್ಕೆ ಹೆಣ್ಣು ಯಾವ ರೀತಿಯ ಪ್ರಯತ್ನಗಳನ್ನು ಮಾಡುತ್ತಾಳೆ ಹಾಗೂ ಹೇಗೆ ಮುನ್ನುಗ್ಗುತ್ತಾಳೆ ಎಂಬುದು ಈ ಸಿನಿಮಾದ ಕಥಾ ವಸ್ತು. ಇದರಲ್ಲಿ ಮೂರು ಪಾತ್ರಗಳ ಕಥೆಗಳನ್ನು ನಿರ್ದೇಶಕರು ಜೊತೆ ಜೊತೆಯಲಿ ಹೇಳುವುದಕ್ಕೆ ಹೊರಟಿದ್ದಾರೆ. ಅಮ್ಮಚ್ಚಿಯ ಕಥೆಯೊಂದಿಗೆ ಅಕ್ಕುವಿನ ಮನಕಲಕುವ ಕಥೆ ಹಾಗೂ ಪುಟ್ಟಮತ್ತೆ ಹಿಂದಿನ ಜೀವನದ ಕಥೆಯೊಂದಿಗೆ ತಳುಕು ಹಾಕುತ್ತಾ ಹೋಗುತ್ತದೆ. ತಾನು

ಇಷ್ಟಪಟ್ಟ ಹುಡುಗನೊಂದಿಗೆ ಮದುವೆಯಾಗುತ್ತೇನೆ ಎಂಬುದು ಅಮ್ಮಚ್ಚಿಯ ದಿಟ್ಟ ನಿಲುವಾದರೆ ತನ್ನನ್ನು ಮದುವೆ ಮಾಡಿಕೊಂಡವನು ತನ್ನನ್ನು ಸ್ವೀಕರಿಸಿಲ್ಲ ಎನ್ನುವುದು ಅಕ್ಕುವಿನ ತಳಲಾಟ. ಮದುವೆಯಾದ ಹೊಸದರಲ್ಲಿ ವಿಧವೆಯಾಗಿ ಅಂದಿನ ಸಮಾಜದ ಕೆಟ್ಟ ದೃಷ್ಟಿಗೆ ಬಲಿಯಾದ ಪುಟ್ಟಮತ್ತೆಯ ಜೀವನ ಇನ್ನೊಂದು ಹೋರಾಟ. ಈ ಮೂರು ಕಥೆಗಳನ್ನು ಆಧರಿಸಿ ಸಿನಿಮಾ ಪರದೆಯ ಮೇಲೆ ಕಲಾತ್ಮಕತೆಯನ್ನು ಸೃಷ್ಟಿಸಲಾಗಿದೆ. ಈ ಚಿತ್ರದಲ್ಲಿ ಮೂವರು ಕಥಾ ನಾಯಕಿಯರಿದ್ದಾರೆ. ಈ ಮೂವರೂ ತಮ್ಮದೇ ಆದ ರೀತಿಯಲ್ಲಿ ಸ್ತ್ರೀ ಸಮಾಜದ ಮೂರು ಆಯಾಮಗಳಲ್ಲಿ ಕಾಣಿಸಿಕೊಳ್ಳುತ್ತಾರೆ. ಜೊತೆಗೆ ಇದೆಲ್ಲವೂ ಒಂದು ಸುಂದರ ಕಥೆಯಾಗಿ ಪೋಣಿಸಲ್ಪಟ್ಟಿದೆ. 80-90ರ ದಶಕದಲ್ಲಿ ಹೆಣ್ಣು ಮಕ್ಕಳು ಎದುರಿಸುತ್ತಿದ್ದ ಸಾಮಾಜಿಕ, ಧಾರ್ಮಿಕ ಕಟ್ಟುಪಾಡುಗಳನ್ನು ತಿಳಿಸುವ ಚಿತ್ರವಿದು. ರಾಜ್ ಬಿ. ಶೆಟ್ಟಿಯವರು ವೆಂಕಟಪ್ಪಯ್ಯ ಪಾತ್ರದಲ್ಲಿ ಇಡೀ ಚಿತ್ರಕ್ಕೆ ಜೀವಂತಿಕೆಯನ್ನು ತುಂಬಿದ್ದಾರೆ.

ಮೂರು ತಲೆಮಾರಿನ ಕಥೆಯನ್ನು ಹೇಳುವ ಪುಟ್ಟಮ್ಮತ್ತೆ, ಅಕ್ಕು ಹಾಗು ಅಮ್ಮಚ್ಚಿ ಎನ್ನುವ ಮೂರು ಪ್ರಧಾನ ಪಾತ್ರಗಳು ಎಂಬತ್ತು ತೊಂಬತ್ತರ ದಶಕದ ಪುರುಷ ಪ್ರಧಾನ ಸಮಾಜದಿಂದ ದಬ್ಬಾಳಿಕೆಗೆ ಗುರಿಯಾದವುಗಳೇ. ಅವುಗಳ ಆತ್ಮದ ಕೂಗು ಒಂದೇ. ಸಿನಿಮಾ ನಿರೂಪಣೆಯೇ ಹೇಳುವಂತೆ ಧಾರುಣ ಬದುಕಿನ ಪುಟಗಳು ಒಂದೊಂದಾಗಿ ತೆರೆದುಕೊಳ್ಳುವುದನ್ನು ಆಧುನಿಕರಾದ ನಾವು ಕಣ್ರೆಪ್ಪೆ ಮಿಸುಕದಂತೆ ನೋಡಬೇಕು. ಹಾಗೆಂದು ಇದು ಬರೇ ಹೆಣ್ಣಿನ ಗೋಳಿನ ಕಥೆಗಳನ್ನು ಹೇಳುವ ಸಿನೆಮಾವಲ್ಲ. ನಿರ್ದೇಶಕಿ ಚಂಪಾ ಶೆಟ್ಟಿಯವರು ಒಂದು ಗಂಭೀರ ವಿಚಾರವನ್ನು ಆಪ್ತ ಹಾಗೂ ಭಾವಪೂರ್ಣವಾಗಿ ಸಿನೆಮಾದ ಚೌಕಟ್ಟಿಗೆ ಇಳಿಸಿದ್ದಾರೆ. ಪುರುಷ ಪ್ರಾಧಾನ್ಯ ಸಮಾಜದ ಹೇರಿಕೆಗಳ ನಡುವೆ ಇದನ್ನು ಪ್ರಶ್ನೆ ಮಾಡಲೇ ಬೇಕು ಎಂದು ಮನಸ್ಸಿನಲ್ಲಿಯೇ ಅಂದುಕೊಂಡ ಯೋಚನೆಗಳೆಲ್ಲ ಬಿಸಿಲಿಗೆ ಇಬ್ಬನಿ ಕರಗಿದಂತೆ ಕರಗುತ್ತಿತ್ತು. ಆದರೂ ಅಪರೂಪಕ್ಕೊಮ್ಮೆ ಆಕೆ ಎತ್ತುವ ಪ್ರಶ್ನೆಗಳಿಗೆ ತೂಕವಿದೆ. ಹಾಗಂತ ಪುರುಷ ಸಮಾಜ ಅದಕ್ಕೆ ಮೌಲ್ಯವನ್ನು ನೀಡುತ್ತದೆಯೆಂದಲ್ಲ.

ಉಡುಪಿ ಕುಂದಾಪುರ ಪರಿಸರದಲ್ಲಿ ಈ ಸಿನಿಮಾದ ಕಥೆ ವಿಸ್ತರಿಸಿಕೊಳ್ಳುವುದರಿಂದ ಅಲ್ಲಿನ ಪರಿಸರದ ಭಾಷೆಯ ಬಳಕೆಯಾಗಿದೆ. ಅಲ್ಲಿನ ಪ್ರದೇಶದ ಆಚರಣೆಗಳಿಂದ ಹಿಡಿದು ಅಡುಗೆ ಮನೆಯವರೆಗೆ ಅಂದಿನ ಚಿತ್ರಣವನ್ನು ನಾಜೂಕಾಗಿ ತೆರೆಯ ಮೇಲೆ ತರಲಾಗಿದೆ. ದೀಪಾವಳಿ ಹಬ್ಬದ ಆಚರಣೆ, ತೊಟ್ಟಿಲು ಶಾಸ್ತ್ರ, ಭಜನೆ, ಕೊಟ್ಟೆ ಕಡುಬು ಕಟ್ಟುವುದು, ಚನ್ನೆಮಣೆಯ ಆಟ, ದೊಡ್ಡ ದೊಡ್ಡ ಪಾತ್ರೆಗಳ ಬಳಕೆ, ಬೀಸುವ ಕಲ್ಲು, ಸೌದೆ ಒಲೆ, ಅಂದಿನ ಕಾಲದ ತೊಟ್ಟಿ ಮನೆಗಳು, ಎಲ್ಲವೂ ಕೂಡ ಅಷ್ಟು ಸಹಜ ಅನಿಸುತ್ತದೆ.

ಅಮ್ಮಚ್ಚಿ ಪಾತ್ರದಲ್ಲಿ ನಟಿಸಿರುವ ವೈಜಯಂತಿ ಅಡಿಗ ಅವರ ನಟನೆ ಅತ್ಯಂತ ಪ್ರಬುದ್ಧವಾಗಿತ್ತು. ಆ ಪಾತ್ರ ಅವರೆ ಆಗಿದ್ದರು. ಪ್ರಶ್ನಿಸುವ ಸ್ವಭಾವದ ಹುಡುಗಿ ಇನ್ಯಾರದೇ ಪ್ರಶ್ನೆಗಳಿಗೆ ಅನಿವಾರ್ಯ ಉತ್ತರವಾಗುವುದನ್ನು ಸಿನಿಮಾದಲ್ಲಿ ನಾವು ಕಾಣಬಹುದು. ಬದುಕಿನ ಮುಖ್ಯ ಭಾಗದ ಪುಟಗಳಲ್ಲಿ ಬದುಕೇ ಆಗಿದ್ದವರು ತನ್ನ ಬದುಕನ್ನೇ ಕಿತ್ತುಕೊಂಡು

ಹೋದಾಗ ಆ ಅತಂತ್ರ ಸ್ಥಿತಿಯಲ್ಲಿ ಬದುಕುವ ಅಕ್ಕು ಪಾತ್ರವನ್ನು ನಿರ್ವಹಿಸಿದವರು ದೀಪಿಕಾ ಆರಾಧ್ಯ. ಅಮ್ಮನ ಮುದ್ದಿನ ಮಗಳಾಗಿದ್ದು ತಂದೆಯ ಪ್ರೀತಿಯನ್ನೇ ಕಾಣದೇ ನೆರೆಹೊರೆಯವರ ಆಸರೆಯಲ್ಲಿ ಬೆಳೆದು ತನ್ನ ಚಿಕ್ಕವಯಸ್ಸಿನಲ್ಲಿ ಗಂಡನನ್ನು ಕಳೆದುಕೊಂಡು ಬದುಕಿನುದ್ದಕ್ಕೂ ನೋವನ್ನೇ ಉಂಡ ಪುಟ್ಟಮತ್ತೆ ಪಾತ್ರದಲ್ಲಿ ನಟಿಸಿರುವ ರಾಧಾಕೃಷ್ಣ ಉರಾಳ ಸಿನೆಮಾ ನೋಡಿ ಮುಗಿದ ನಂತರವೂ ಕಾಡುತ್ತಾರೆ. ಜೀವನದಲ್ಲಿ ಕಷ್ಟದ ಮೇಲೆ ಕಷ್ಟವನ್ನು ಎದುರಿಸಿ ಬಂದ ಪುಟ್ಟಮ್ಮತ್ತೆಗೆ ಹೇಗೆ ಒಬ್ಬಾಕೆ ಆಶ್ರಯ ಕೊಡುತ್ತಾಳೆ ಮತ್ತು ಆಕೆಯ ಮನೆಗೆ ಪುಟ್ಟಮ್ಮತ್ತೆ ತೋರುವ ನಿಷ್ಠೆ, ಆಕೆಯ ಋಣವನ್ನು ತಾನು ಮರೆಯಬಾರದೆನ್ನುವ ಆಕೆಯ ಆಶಯ ಎಲ್ಲರಿಗೂ ಮಾದರಿ.

ಎರಡೂ ಸಿನಿಮಾಗಳನ್ನು ತುಲನಾತ್ಮಕವಾಗಿ ನೋಡಿದಾಗ ಹೆಣ್ಣಿನ ಅಂತರಂಗದ ತೋಳಲಾಟಗಳು ಅಂದಿಗೂ ಇಂದಿಗೂ ಹೆಚ್ಚೇನೂ ಬದಲಾವಣೆಯನ್ನು ಕಂಡಿಲ್ಲವೆನ್ನಬಹುದು. ಅಂದಿನ ಸ್ಥಿತಿಗತಿಗಳು ಶಿಕ್ಷಣ, ತಂತ್ರಜ್ಞಾನದ ಕೊರತೆಯಿಂದಾಗಿ ಎದುರಿಸಿದ್ದುದಾದರೆ, ಈಗಿನ ಸ್ಥಿತಿಗತಿಗಳು ಅವೆಲ್ಲ ಇದ್ದೂ ಎದುರಿಸುವಂತದ್ದಾಗಿದೆ. ಗಂಡಿನ ದಬ್ಬಾಳಿಕೆಯು ಹೆಣ್ಣಿನ ಅಸಾಹಾಯಕತೆಯ ಲಾಭವನ್ನು ಪಡೆಯುತ್ತಿರುವುದನ್ನು ಕಾಣಬಹುದು.

ಒಟ್ಟಿನಲ್ಲಿ ವೈದೇಹಿಯವರ ಕಥೆಗಳನ್ನು ಆಧರಿಸಿದ ಎರಡೂ ಸಿನಿಮಾಗಳು ಮತ್ತೆ ಮತ್ತೆ ಕಾಡುವಂತಹದ್ದು. ಕನ್ನಡ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ ಹೆಣ್ಣಿನ ನೋವು ನಲಿವುಗಳಿಗೆ ಅಕ್ಷರ ರೂಪ ಕೊಡುವ ಕಾರ್ಯ ನಡೆದಿದೆ. ಅದನ್ನು ವೈದೇಹಿಯವರು ಅತ್ಯಂತ ಮನಕಲಕುವಂತೆ ಮಾಡಿದ್ದಾರೆ. ಅದಕ್ಕೆ ತಕ್ಕಂತೆ ಸಿನಿಮಾ ನಿರ್ದೇಶಕರೂ ಕೂಡಾ ಸಿನಿ ಪ್ರಿಯರ ರುಚಿಗೆ ತಕ್ಕಂತೆ ಪರದೆಯ ಮೇಲೆ ತರುವಲ್ಲಿ ಯಶಸ್ವಿಯಾಗಿದ್ದಾರೆ.

## ಪರಾಮರ್ಶನ ಗ್ರಂಥಗಳು:

1. ಮುರಳೀಧರ ಉಪಾಧ್ಯ ಹಿರಿಯಡಕ. (2018). ವೈದೇಹಿ ಜೀವನ ಮತ್ತು ಕೃತಿಗಳ ಸಮೂಹ ಶೋಧ. ಅಭಿನವ ಪ್ರಕಾಶನ. ಬೆಂಗಳೂರು.
2. ಸವಿತಾ ನಾಗಭೂಷಣ & ತಾರಿಣಿ ಶುಭದಾಯಿನಿ. (2019). ಇರುವಂತಿಗೆ- ವೈದೇಹಿ ಗೌರವ ಗ್ರಂಥ 2019. ಎಚ್ಐಜಿ ಪ್ರಕಾಶನ. ಶಿವಮೊಗ್ಗ.
3. ಶ್ರೀನಿವಾಸ ರಾವ್. (2018). ಹೊಸಕಿ ಹೋದ ಹೂವುಗಳ ಹೋರಾಟ-ಅಮ್ಮಚ್ಚಿಯೆಂಬ ನೆನಪು(ಲೇ). ಕನ್ನಡ ಪ್ರಭ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.